ಹನಿ



## ಇಮ್ರಾನ್ ಮದುವೆ?

ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಇಮ್ರಾನ್ ಖಾನ್ ಮದುವೆಯಾಗಲು ರೆಡಿ; ಆದರೆ ಮದುವೆಯಾಗಲು ಒಂದೇ ಒಂದು ಕಂಡಿಷನ್ ಏನೆಂದರೆ, ಪಾಕಿಸ್ತಾನದಲ್ಲಿ ಈಗ ಇರುವ ಪ್ರಧಾನಿ ನವಾಜ್ ಷರೀಫ್ ಸರ್ಕಾರ ಅಧಿಕಾರದಿಂದ ಕೆಳಗಿಳಿಯಬೇಕು! ಕ್ರಿಕೆಟ್ ತಂಡದಲ್ಲಿ ಇಂತಹ ಕಂಡಿಷನ್‌ಗಳನ್ನು ಈಡೇರಿಸಿಕೊಳ್ಳುವುದು ಸುಲಭ. ಆದರೆ ಈಗ ಇಮ್ರಾನ್ ಖಾನ್ ಇರುವುದು ರಾಜಕೀಯದಲ್ಲಿ. ಅಲ್ಲಿ ಇಂತಹ ಕಂಡಿಷನ್‌ಗಳು ಅಷ್ಟೊಂದು ಸುಲಭವಾಗಿ ಈಡೇರುವುದಿಲ್ಲ. ಇನ್ಸಾಫ್ ಪಕ್ಷದ ಮುಖ್ಯಸ್ಥ ಇಮ್ರಾನ್ ಖಾನ್ ಮತ್ತು ಧರ್ಮಗುರು ತಾಹಿರುಲ್ ಖಾದ್ರಿ ನೇತೃತ್ವದ ಹೋರಾಟವನ್ನು ಬಗ್ಗುಬಡಿಯಲೆಂದೇ ನವಾಜ್ ಷರೀಫ್, ಭಾರತದ ಗಡಿಯಲ್ಲಿ ಗುಂಡಿನ ಮೊರೆತದ ಒಳರಾಜಕೀಯ ಶುರುವಿಟ್ಟುಕೊಂಡಿದ್ದಾರೆ! ಹಾಗಾಗಿ ಇಮ್ರಾನ್ ಮದುವೆ ಸದ್ಯಕ್ಕೆ ಆಗುವುದು ಕಷ್ಟ.

61ರ ಹರೆಯದ ಇಮ್ರಾನ್ ಖಾನ್ ನಿಸ್ಸಂಶಯವಾಗಿಯೂ ಜಗತ್ತಿನ ಅತ್ಯುತ್ತಮ ಕ್ರಿಕೆಟ್ ನಾಯಕರಲ್ಲೊಬ್ಬ. ಆತನ ನಾಯಕತ್ವದಲ್ಲಿ 1992ರ ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡನ್ನು ಬಗ್ಗುಬಡಿದು ಪಾಕಿಸ್ತಾನ ಕಪ್ ಗೆದ್ದಾಗಲೇ ಅದು ಸಾಬೀತಾಗಿದೆ. 1995ರಲ್ಲಿ ಇಮ್ರಾನ್ ಮತ್ತು ಇಂಗ್ಲೆಂಡಿನ ಮಾಡೆಲ್ ಜೆಮಿಮಾಳ ಮದುವೆ ವಿಜೃಂಭಣೆಯಿಂದಲೇ ನಡೆದಿತ್ತು. ಕೋಟ್ಯಾಧಿಪತಿ, ಆಂಗ್ಲೊ-ಫ್ರೆಂಚ್ ಫೈನಾನ್ಸಿಯರ್ ಜೇಮ್ಸ್ ಗೋಲ್ಡ್‌ಸ್ಮಿತ್‌ನ ಮಗಳಾಕೆ. ಆದರೆ ಎರಡು ಮಕ್ಕಳಾದ ಬಳಿಕ 2004ರಲ್ಲಿ ಆ ಮದುವೆ ಮುರಿದುಬಿತ್ತು. ಅಲ್ಲಿಂದೀಚೆಗೆ ಇಮ್ರಾನ್ ಮದುವೆಯ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ತೆಹ್ರಿಕೆ ಇನ್ಸಾಫ್ ಪಕ್ಷ ವನ್ನು ಬಲಪಡಿಸುವುದರಲ್ಲೇ ಬ್ಯುಸಿಯಾದ. ಅದರ ನಡುವೆ ಕ್ಯಾನ್ಸರ್‌ಗೆ ಬಲಿಯಾದ ಅಮ್ಮನ ನೆನಪಿಗೆ ಅತ್ಯಾಧುನಿಕ ಸೌಲಭ್ಯಗಳುಳ್ಳ 'ಶೌಖತ್ ಖಾನೂಮ್ ಕ್ಯಾನ್ಸರ್ ಆಸ್ಪತ್ರೆ' ಕಟ್ಟಿ ಲಕ್ಷಾಂತರ ಬಡವರಿಗೆ ಉಚಿತ ಕ್ಯಾನ್ಸರ್ ಚಿಕಿತ್ಸೆಯ ವ್ಯವಸ್ಥೆ ಮಾಡಿದ. ಲಾಹೋರ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದ ನಮಾಲ್ ಕಾಲೇಜ್ ಆರಂಭಿಸಲು ನೆರವಾದ. ಹೆಂಡತಿ ಬಿಟ್ಟ ಬಳಿಕ ಇಮ್ರಾನ್ ಪ್ರೇಮದ ಬಗ್ಗೆ ಒಂದಲ್ಲ ಒಂದು ವದಂತಿಗಳು ಹಬ್ಬುತ್ತಿವೆ. ಇದನ್ನು ತಪ್ಪಿಸಲೆಂದೇ ಹಿರಿಯರು ಮತ್ತೊಂದು ಮದುವೆಗೆ ಒತ್ತಾಯಿಸುತ್ತಿದ್ದಾರಂತೆ.

ಚುನಾವಣೆಯಲ್ಲಿ ಶೇಕಡಾ 10ರಷ್ಟು ಮತ ಪಡೆದ ಇನ್ಸಾಫ್ ಪಕ್ಷ ಈಗ ಇನ್ನಷ್ಟು ಬಲವಾಗಿದೆ. ನವಾಜ್ ಷರೀಫ್ ವಿರುದ್ಧದ ಹೋರಾಟದಲ್ಲಿ ಗೆದ್ದರೆ ಇಮ್ರಾನ್ ಖಾನ್ ಪ್ರಧಾನಿಯಾಗಲೂ ಬಹುದು. ಹಾಗಾದಲ್ಲಿ ಕ್ರಿಕೆಟ್ ನಾಯಕನೊಬ್ಬ ದೇಶವೊಂದರ ಪ್ರಧಾನಿಯಾದ ಮೊದಲ ಉದಾಹರಣೆ ಅದಾಗಲಿದೆ! 90 ದಶಲಕ್ಷ ಡಾಲರ್ ಮೌಲ್ಯದ ಒಟ್ಟು ಆಸ್ತಿ ಹೊಂದಿರುವ ಇಮ್ರಾನ್, ಮದುವೆಗೂ-ರಾಜಕೀಯಕ್ಕೂ ನಂಟು ಬೆಸೆದಿರುವುದು ಕೂಡಾ ರಾಜಕೀಯವೇ. ಜನ ಮನ ಕರಗಿ ಅಧಿಕಾರಕ್ಕೆ ತರಬಹುದೆ? ಕಾದು ನೋಡಬೇಕು.

## ಸಿರಿವಂತ ರೊನಾಲ್ಡೊ

ಫಿಫಾ ವಿಶ್ವಕಪ್ 2014 ಏರ್ಪಡಿಸಿದ ಬ್ರೆಜಿಲ್‌ಗೆ ಎಷ್ಟು ಆದಾಯ ಬಂತೋ ಗೊತ್ತಿಲ್ಲ. ಆದರೆ ಪೋರ್ಚುಗಲ್ ತಂಡದ ನಾಯಕ ಕ್ರಿಶ್ಚಿಯಾನೋ ರೊನಾಲ್ಡೊ ಮಾತ್ರ ಭರ್ಜರಿ ಶ್ರೀಮಂತನಾಗಿದ್ದಾನೆ. ಪೋರ್ಚುಗಲ್ ವಿಶ್ವಕಪ್ ಫೈನಲಿಗೆ ಬರದಿದ್ದರೂ, ರೊನಾಲ್ಡೊ ಮಾರುಕಟ್ಟೆ ಮೌಲ್ಯ ಒಂದೇ ಸಮನೆ ಏರಿಕೆಯಾಗಿದೆ. ಸದ್ಯಕ್ಕೆ ಈತನ ಆಸ್ತಿ ಮೌಲ್ಯ 290 ದಶಲಕ್ಷ ಅಮೆರಿಕನ್ ಡಾಲರ್. ಲಯೊನೆಲ್ ಮೆಸ್ಸಿ, ರೂನೀ ಸೇರಿದಂತೆ ಜಗತ್ತಿನ ಅತ್ಯಂತ ಶ್ರೀಮಂತ 10 ಫುಟ್‌ಬಾಲ್ ಆಟಗಾರರ ಒಟ್ಟು ಆಸ್ತಿಯ ಕಾಲುಭಾಗವಿದು!

ಎರಡು ವಿವಿಧ ಯೂರೋಪಿಯನ್ ಲೀಗ್ ಸ್ಪರ್ಧೆಗಳಲ್ಲಿ 'ಗೋಲ್ಡನ್ ಶೂ' ಗೆದ್ದ ವಿಶ್ವದ ಏಕೈಕ ಫುಟ್ಬಾಲಿಗ ಈ ರೊನಾಲ್ಡೊ. 10 ವರ್ಷದ ಎಳವೆಯಲ್ಲೇ ಅಂಡೊರಿನಾ ಕ್ಲಬ್ ಪರವಾಗಿ ಆಡುತ್ತಿದ್ದ ರೊನಾಲ್ಡೋನನ್ನು, ಬೇರೆ ಕ್ಲಬ್‌ನವರು 175 ಪೌಂಡ್‌ಗೆ ಖರೀದಿಸಲು ಮುಂದೆ ಬಂದಿದ್ದರಂತೆ! ಈಗಂತೂ ರಿಯಲ್ ಮ್ಯಾಡ್ರಿಡ್‌ನ ಟ್ರಂಪ್‌ಕಾರ್ಡ್ ಈ ರೊನಾಲ್ಡೊ. ರಿಯಲ್ ಮ್ಯಾಡ್ರಿಡ್ ಕ್ಲಬ್ 5 ವರ್ಷದ ಅವಧಿಗೆ 200 ದಶಲಕ್ಷ ಡಾಲರ್‌ಗೆ ಈತನನ್ನು ಖರೀದಿಸಿದೆ. ಈತನ ಮಾರುಕಟ್ಟೆ ಮೌಲ್ಯ ಎಷ್ಟೊಂದು ಏರಿದೆಯೆಂದರೆ, ಜಗದ್ವಿಖ್ಯಾತ ಕಂಪೆನಿಗಳೆಲ್ಲ ಜಾಹೀರಾತಿಗಾಗಿ ಬೆನ್ನು ಹತ್ತಿವೆ. ಕೊಕೊ ಕೋಲ, ಸುಜುಕಿ, ನೈಕ್, ಟ್ಯಾಗ್ ಹೂವರ್, ಅರ್ಮಾನಿ, ಕ್ಯಾಸ್ಟ್ರಲ್ ಆಯಿಲ್, ಬುಗಾಟಿ, ಲಿನಿಕ್, ಕ್ಲಿಯಾ, ಕೊನಾಮಿ, ಮೋಟರೋಲ ಮುಂತಾಗಿ ಹಲವು ಕಂಪೆನಿಗಳ ಮಾಡೆಲಿಂಗ್ ಒಪ್ಪಂದಗಳಿಗೆ ಸಹಿ ಹಾಕಿದ್ದಾನೆ. 29ರ ಹರೆಯದ ರೊನಾಲ್ಡೊ ಈಗಾಗಲೆ 9 ಮಂದಿ ಗರ್ಲ್‌ಫ್ರೆಂಡ್‌ಗಳ ಕೈ ಬದಲಾಯಿಸಿದ್ದರೂ ಯಾರನ್ನೂ ಮದುವೆಯಾಗಿಲ್ಲ. ಸದ್ಯಕ್ಕೆ ಮಾಡೆಲ್ ಐರಿನ್ ಶೈಕ್ ಜತೆ ಓಡಾಡುತ್ತಿರುವ ರೊನಾಲ್ಡೋಗೆ ಕಾರುಗಳೆಂದರೆ ಪಂಚಪ್ರಾಣ. ಈತನ ಮನೆಯಲ್ಲಿ ಲ್ಯಾಂಬರ್ಗಿನಿ ಅವೆಂಟಡೋರ್, ಕೋಎನಿಗ್ಸನ್ ಸಿಸಿಎಕ್ಸ್, ಫೆರಾರಿ 599, ರೋಲ್ಸ್ ರಾಯ್ಸ್ ಪ್ಯಾಂಥಮ್, ಆಸ್ಟನ್ ಮಾರ್ಟಿನ್ ಡಿಬಿ9, ಬೆಂಟ್ಲೀ ಕಾಂಟಿನೆಂಟಲ್, ಆಡಿ ಆರ್-8, ಫೆರಾರಿ ಎಫ್ 430, ಮರ್ಸಿಡಿಸ್ ಬೆಂಜ್ ಸಹಿತ ಒಟ್ಟು 15 ಕಾರುಗಳಿವೆಯಂತೆ!



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65